ಅ.ದಾ ನಂ.376/2009

ಡಿ.ಡಬ್ಲ್ಯೂ-3

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 13-01-2020

**ಪಾಟೀ ಸವಾಲುಃ**- ಶ್ರೀ ಎನ್.ಜಿ ವಕೀಲರಿಂದ

ನಾನು ಮುನಿಸಿಪಲ್ ಅಧ್ಯಕ್ಷನಾಗಿದ್ದು, 1996 ರಿಂದ ಇದುವರೆಗೆ ಸುಮಾರು 200 ಪತ್ರಗಳು ಅಂದರೆ, ಪಾಲುಪಾರಿಕತ್ತು, ರಾಜೀ ಪತ್ರಗಳು ಇತರೆ ಪತ್ರಗಳಿಗೆ ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ನಾನು ಸಹಿ ಮಾಡಿರುವ 200 ಪತ್ರಗಳ ಪಕ್ಷಗಾರರು ಪತ್ರಗಳ ಬಗ್ಗೆ ನನಗೆ ನೆನಪಿಲ್ಲ. ವಾದಿ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಎಷ್ಟು ಸ್ವತ್ತುಗಳಿದ್ದವು, ಅವುಗಳ ಸ.ಸಂಖ್ಯೆ ವಿಸ್ತೀರ್ಣ, ಚೆಕ್ಕುಬಂದಿ ಹೇಳಲಾಗುವುದಿಲ್ಲ. ವಾದಿಯ ತಾಯಿ ವ್ಯಾಪಾರ ಮಾಡುತ್ತಿದ್ದರು, ನೌಕರಿಯಲ್ಲಿರಲಿಲ್ಲ. ವಾದಿಯ ತಾಯಿ ಕಡ್ಡಿಪುಡಿ ವ್ಯಾಪಾರ ಮಾಡುತ್ತಿದ್ದರು, ಅದಕ್ಕೆ ಪರವಾನಿಗೆ ಪಡೆದಿರಲಿಲ್ಲ. ದಿಃ 25-06-1994 ರ ಪಂಚಾಯ್ತಿ ಪಾಲುಪಟ್ಟಿಗೆ ವಾದಿ ಸಹಿ ಮಾಡಿಲ್ಲ. ದಿಃ 25-06-1994 ರ ಪಂಚಾಯ್ತಿ ಪಾಲುಪಟ್ಟಿಯಲ್ಲಿ ನಮೂದಾಗಿರುವ ಸ್ವತ್ತಿನ ಸರ್ವೆ ನಂ., ಚೆಕ್ಕುಬಂದಿ ಗೊತ್ತಿಲ್ಲ ಆದರೆ 4 ಎಕರೆ ಎಂದು ನಮೂದಾಗಿತ್ತು. ಸದರಿ ಪಾಲುಪಟ್ಟಿಯನ್ನು ಮನೆಯಲ್ಲಿಯೇ ಬರೆಯಲಾಗಿತ್ತು. ಸದರಿ ದಾಖಲೆ ನೋಂದಣಿಯಾಗಿಲ್ಲ. ದಾವಾ ಸ್ವತ್ತುಗಳು ರಂಗಪ್ಪನ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸಾಕ್ಷಿಯು ಸ್ವಯಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ರಂಗಪ್ಪ ಬದುಕಿದ್ದಾಗ ತನ್ನ ಸ್ವತ್ತುಗಳಿಗೆ ಯಾವುದೇ ದಾಖಲೆ ಬರೆದಿರಲಿಲ್ಲ ಎಂದರೆ ಸರಿ.

ದಾವಾ ಸ್ವತ್ತುಗಳು ವಾದಿಯ ತಂದೆಯ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು, ವಾದಿಯ ಹಿಸ್ಸೆಯನ್ನು ತಪ್ಪಿಸಲು ಪ್ರತಿವಾದಿಯೊಂದಿಗೆ ಷರೀಕಾಗಿ ದಿಃ 25-06-1994 ರ ಪಂಚಾಯ್ತಿ ಪಾಲುಪಟ್ಟಿಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 25-06-1994 ರ ಪಂಚಾಯ್ತಿ ಪಾಲುಪಟ್ಟಿಗೆ ವಾದಿಯ

ತಂದೆ ಸಹಿ ಮಾಡಿದ್ದಾರೆ. ನಾನು ಪ್ರತಿವಾದಿಯರೊಂದಿಗೆ ವಿಶ್ವಾಸದಿಂದ ಇದ್ದೇನೆ ಎಂದರೆ ಸರಿ. ದಾವಾ ಐಟಂ ನಂ.2 ನ್ನು ವಾದಿಯ ತಂದೆ ಕಾಲದಿಂದಲೂ ಒಟ್ಟಾಗಿ ಅನುಭವಿಸುತ್ತಿದ್ದರು ಎಂದರೆ ಸರಿ. ನಂತರ ಸದರಿ ಸ್ವತ್ತು ಕುಟುಂಬದ ಪರವಾಗಿ 2 ನೇ ಪ್ರತಿವಾದಿ ಹೆಸರಿಗೆ ಮಂಜೂರಾಗಿದೆ ಎಂದರೆ ಸರಿ.

**ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರ ವಕೀಲರಿಂದ**

ದಿಃ 25-06-1994 ರ ಪಂಚಾಯ್ತಿ ಪಾಲುಪಟ್ಟಿಗೆ ಪ್ರತಿವಾದಿ 3,4 ಸಹಿ ಮಾಡಿದ್ದಾರೆ. ಆ ದಿನ ಪಾಲುಪಟ್ಟಿ ಬರೆಯುವಾಗ ಹೆಣ್ಣುಮಕ್ಕಳಿಗೆ ಹಿಸ್ಸೆ ನೀಡಿಲ್ಲ, ಗಂಡು ಮಕ್ಕಳು ಮಾತ್ರ ಹಿಸ್ಸೆ ಮಾಡಿಕೊಂಡಿದ್ದಾರೆ. ದಿಃ 25-06-1994 ರ ಪಂಚಾಯ್ತಿ ಪಾಲುಪಟ್ಟಿ ನೋಂದಣಿಯಾಗಿಲ್ಲ. ಸಾಕ್ಷಿಯು 4 ಎಕರೆ ವಾದಿಯ ತಂದೆಯ ಸ್ವಯಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ಅದರ ಸ.ನಂ., ಚೆಕ್ಕುಬಂದಿ ಗೊತ್ತಿಲ್ಲ. ವಾದಿಯ ತಂದೆ ಬದುಕಿದ್ದಾಗ ಯಾವುದೇ ನೊಂದಾಯಿತ ದಾಖಲೆ ಮಾಡಿಲ್ಲ. ಸದರಿ ಪಾಲುಪಟ್ಟಿಯ ಒಕ್ಕಣೆಯನ್ನು ನಾನು ಹೇಳಿ ಬರೆಸಿಲ್ಲ. ವಾದಿ-ಪ್ರತಿವಾದಿಯರ ಕುಟುಂಬದ ಸ್ವತ್ತುಗಳ ಬಗ್ಗೆ ನನಗೆ ಮಾಹಿತಿ ಇಲ್ಲದೇ ಇದ್ದರು, ಪ್ರತಿವಾದಿಗಳಿಗೆ ಸಹಾಯ ಮಾಡಲು ಪಾಲುಪಟ್ಟಿಯನ್ನು ಸೃಷ್ಟಿಮಾಡಿಕೊಂಡು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳಲ್ಲಿ ಪ್ರತಿವಾದಿ 3,4 ರವರಿಗೂ ಸಮ ಹಿಸ್ಸಾ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ